ಸಮಾಧಾನವಾಗಿ ಮತ್ತೆ ನನ್ನ ಜಾಗಕ್ಕೆ ಹಿಂತಿರುಗಿದೆ. ಸೂರ್ಯ ಕಂತುತಿದ್ದ. ಮತ್ತೆ ಅದೇ ಗೊಂದಲ, ಅವ್ವನ ಮೇಲಿನ ಸಿಟ್ಟು, ಅಸಹಾಯಕತೆಯಲ್ಲಿ ಕುಳಿತೆ. ಪಕ್ಕದ ಕೋಣೆಯಿಂದ ಮಾತು ಕೇಳುತ್ತ ಕೇಳುತ್ತ ಸ್ಪಷ್ಟವಾಗಲಾರಂಭಿಸಿತ್ತು. ದೊಡ್ಡವ್ವ ಸ್ವಲ್ಪ ಏರಿದ ಧ್ವನಿಯಲ್ಲೇ ಹೇಳುತ್ತಿದ್ದಳು. ಅವಳನ್ನು ಹೊರತುಪಡಿಸಿ ಬೇರೆ ಯಾರೋ ಮಾತನಾಡುತ್ತಿದ್ದರು; ಏನು ಮಾತನಾಡುತ್ತಿದ್ದರು ಎನ್ನುವುದು ತಿಳಿಯುತ್ತಿರಲಿಲ್ಲ. ‘‘ನೀವು ಒಪ್ಪಿಕೊಂಡಂತೆ ಐವತ್ತು ಸಾವಿರ ಕೊಟ್ಟಿದ್ದೀರಿ, ಉಳಿದ ಒಂದು ಲಕ್ಷ ಮದುವೆಯ ಹಿಂದಿನ ದಿನ ಅಂದರೆ ಇವತ್ತು ಕೊಡಬೇಕು. ಇನ್ನುಳಿದ ಐವತ್ತು ನಾಳೆ ತಾಳಿ ಕಟ್ಟಿದ ಅನಂತರ ಕೊಡುವುದು ಎಂದು. ಆದರೆ, ಇನ್ನೂ ದುಡ್ಡು ಕೊಟ್ಟಿಲ್ಲ. ನಾಳೆ ಕೊಡ್ತೀನಿ ಅಂತ ಬೇರೆ ಹೇಳ್ತಾ ಇದ್ದೀರಾ. ನೀವು ಹೀಗ್ ಮಾಡ್ವವರು ಅಂತ ಗೊತ್ತಿದ್ರೆ, ಹುಡ್ಗಿನೇ ಕರ್ಕೊಂಡ್ ಬರ್ತಾ ಇರ್ಲಿಲ್ಲ. ಆ ಹುಡ್ಗಿಗೆ ಎರಡ್ಮೂರ್ ಲಕ್ಷ ಕೊಟ್ಟು ಮದ್ವೆ ಆಗ್ಲಿಕ್ಕೆ ಜನ ಕಾಯ್ತಾ ಇದ್ರು. ಅದಿನ್ನೂ ಚಿಕ್ಕ ಹುಡುಗಿ. ಹದಿನೆಂಟ್ ವರ್ಷ ಆಗಿದ್ದು ಅಷ್ಟೇ. ಇನ್ನೂ ಒಂದ್ ವರ್ಷ ಕಾದಿದ್ರೆ ಬಂಗಾರದಂಗೆ ನಾಲ್ಕ್ ಲಕ್ಷಕ್ಕೆ ಹೋಗ್ತಿತ್ತು. ನೀವು ಎರಡ್ ಲಕ್ಷ ಕೊಡ್ತೀನಿ ಅಂತ ಬಲವಂತ ಮಾಡಿದ್ದಕ್ಕೇ ಆ

